ಸುದ್ದಿ ಸಿಂಚನ

ಓಮಿನಿ ಕಾರ್ ಪಲ್ಟಿ: ಇಬ್ಬರಿಗೆ ಗಾಯ

ವಾಡಿ: ಚಿತ್ತಾಪುರ ತಾಲೂಕಿನ ಲಾಡ್ಲಾಪುರ ಹಾಗೂ ಹಲಕರ್ಟಿ ರಸ್ತೆ ಮಧ್ಯೆಯಲ್ಲಿ ಓಮಿನಿ ಕಾರ್‌ನ ಟೈರ್ ಬ್ಲಾಸ್ಟ್ ಆಗಿ ಪಲ್ಟಿ ಹೊಡೆದ ಕಾರಣ ಬೆಂಕಿ ಹತ್ತಿದ ಘಟನೆ ನಡೆದಿದ್ದು, ಇಬ್ಬರಿಗೆ ಬೆಂಕಿ ತಗುಲಿ ಗಾಯಗಳಾಗಿರುವ ಘಟನೆ ಜರುಗಿದೆ. ಯಾದಗಿರಿಯಿಂದ ಕಲಬುರಗಿಗೆ ಹೋಗುವಾಗ ಈ ಘಟನೆ ಸಂಭವಿಸಿದೆ. ಸುದ್ದಿ ತಿಳಿಯುತ್ತಿದ್ದಂತೆ ವಾಡಿ ಠಾಣೆಯ ಪಿಎಸ್‌ಐ ತಿರುಮಲೇಶ ಕುಂಬಾರ್‌ಅವರು ಸಿಬ್ಬಂದಿಗಳೊಂದಿಗೆ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಈ ಕುರಿತು ವಾಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಕ್ಕಳಿಗೆ ಸಂಸ್ಕಾರ ಕಲಿಸಿ: ಶಾಂತಸೋಮನಾಥ ಶ್ರೀ

ಶಹಾಬಾದ: ದೇಶದ ಭವಿಷ್ಯ ಮಕ್ಕಳ ಕೈಯಲ್ಲಿದ್ದು, ಅವರಿಗೆ ಉತ್ತಮ ಶಿಕ್ಷಣ, ಸಂಸ್ಕೃತಿ ಹಾಗೂ ಸಂಸ್ಕಾರ ನೀಡುವುದು ಪ್ರತಿಯೊಬ್ಬ ಪಾಲಕರ ಕರ್ತವ್ಯವಾಗಿದೆ ಎಂದು ಮಂಗಲಗಿಯ ಶಾಂತೇಶ್ವರ ಹಿರೇಮಠದ ಪೂಜ್ಯರಾದ ಶಾಂತಸೋಮನಾಥ ಶಿವಾಚಾರ್ಯರು ಹೇಳಿದರು. ಅವರು ನಗರದ ವಿಠಲ ರುಕ್ಮಾಯಿ ಮಂದಿರ ಚಾರಿಟೇಬಲ್ ಟ್ರಸ್ಟ್‌ನ ವಿಠಲ ರುಕ್ಮಾಯಿ ಮಂದಿರ ಹಿರಿಯ ಪ್ರಾಥಮಿಕ ಶಾಲೆಯ 25ನೇ ರಜತ ಮಹೋತ್ಸವ ಸಮಾರೋಪ ಸಮಾರಂಭದ ಸಾನ್ನಿಧ್ಯ ವಹಿಸಿ ಮಾತನಾಡಿದರು. ನಿವೃತ್ತ ಪ್ರಾಧ್ಯಾಪಕ ಡಾ. ಶಂಕರ ಸೋಮಯಾಜಿ ಮಾತನಾಡಿದರು. ಸಂಸ್ಥೆಯ ಅಧ್ಯಕ್ಷ ರಾಜಗೋಪಾಲ ಸಾರಡ ಅಧ್ಯಕ್ಷತೆ ವಹಿಸಿದರು. ಆಣವೀರಯ್ಯ ಮಠಪತಿ, ಮುಖ್ಯಗುರು ಅಪ್ಪಾರಾವ ಮಾಲಿಪಾಟೀಲ್, ಪೋಷಕರು, ಸಂಸ್ಥೆ ಪದಾಧಿಕಾರಿಗಳು, ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

2.75 ಟಿಎಂಸಿ ನೀರು ಬಿಡುಗಡೆಗೆ ನಿರ್ಧಾರ

ನೀರನ್ನು ಬೆಳೆಗಳಿಗೆ ಬಳಸಲು ರೈತರಿಗೆ ಶಾಸಕ ಡಾ. ಅಜಯ್ ಸಿಂಗ್ ಮನವಿ
ಸಂಕಷ್ಟದಲ್ಲಿಯೂ ನೀರು ಹರಿಸಲು ಸೂಚಿಸಿದ ಸಿಎಂ, ಡಿಸಿಎಂಗೆ ಅಭಿನಂದನೆ

• **ಕನ್ನಡಪ್ರಭ ವಾರ್ತೆ** ಕಲಬುರಗಿ

ಕೃಷ್ಣಾ ಮೇಲ್ದಂಡೆ ಯೋಜನೆಯ ಅಚ್ಚುಕಟ್ಟು ಪ್ರದೇಶದಲ್ಲಿ 2023-24ನೇ ಸಾಲಿನಲ್ಲಿ ಬೆಳೆದು ನಿಂತಿರುವ ಮೆಣಸಿನಕಾಯಿ ಸೇರಿದಂತೆ ಇತರೆ ಬೆಳೆಗಳಿಗೆ ಕೊನೆಯ ನೀರನ್ನು ಹರಿಸಲು ರಾಜ್ಯ ಸರ್ಕಾರ ನಿರ್ಣಯ ಕೈಗೊಂಡಿದೆ.

ಈ ನಿರ್ಣಯದಂತೆ ಮುಂದಿನ ದಿನಗಳಲ್ಲಿ 2.75 ಟಿಎಂಸಿ ನೀರು ಜಲಾಶಯದಿಂದ ಕಾಲುವೆಗಳಿಗೆ ಹರಿದು ಬರಲಿದ್ದು ಇದು ಮೆಣಸಿನಕಾಯಿ ಬೆಳೆಗೆ ಅನುಕೂಲವಾಗಲಿದೆ.

ನಾರಾಯಣಪುರ ಹಾಗೂ ಆಲಮಟ್ಟಿ ಜಲಾಶಯಗಳಿಂದ ಕಾಲುವೆಗಳಿಗೆ ನೀರು ಹರಿಸಲು ನಿರ್ಧಾರ ಕೈಗೊಂಡು ಕಾಂಗ್ರೆಸ್ ಸರಕಾರ ನುಡಿದಂತೆ ನಡೆದಿದೆ. ಸಂಕಷ್ಟದ ಸಮಯದಲ್ಲಿಯೂ ರೈತರ ಕೈ ಹಿಡಿದಿದೆ. ಕಾಂಗ್ರೆಸ್ ಸರ್ಕಾರ ಸದಾಕಾಲ ರೈತ ಸ್ನೇಹಿ ಎಂಬುದಕ್ಕೆ ಈ ನಿರ್ಣಯವೇ ಕನ್ನಡಿ ಹಿಡಿದಿದೆ ಎಂದು ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಅಧ್ಯಕ್ಷ, ಜೇವರ್ಗಿ ಶಾಸಕ ಡಾ. ಅಜಯ್ ಧರ್ಮಸಿಂಗ್ ಎಂದು ಹೇಳಿದ್ದಾರೆ.

ಪತ್ರಿಕಾ ಹೇಳಿಕೆ ನೀಡಿರುವ ಡಾ. ಅಜಯ್ ಸಿಂಗ್ ಅವರು, ಬರಗಾಲದ ಸಂಕಷ್ಟ ಸಂದರ್ಭದಲ್ಲಿಯೂ ಆಲಮಟ್ಟಿ ಹಾಗೂ ನಾರಾಯಣಪೂರ ಜಲಾಶಯದಿಂದ ಕಾಲುವೆಗೆ ನೀರು ಹರಿಸುವ ನಿರ್ಣಯ ಕೈಗೊಂಡು ರೈತರ ಪರವಾಗಿ ನಿಂತಿರುವ ರಾಜ್ಯದ ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿಕೆ ಶಿವಕುಮಾರ್ ಅವರನ್ನು ಈ ಸಂದರ್ಭದಲ್ಲಿ ಅಭಿನಂದಿಸಿದ್ದಾರೆ.

ಈಗಾಗಲೇ ತಮ್ಮ ಮತಕ್ಷೇತ್ರ ಜೇವರ್ಗಿಯಲ್ಲಿನ ಮೆಣಸಿನಕಾಯಿ ಸೇರಿದಂತೆ ಇತರೆ ಬೆಳೆಗಳ ರೈತರು ನೀರನ್ನು ಸರಿಯಾಗಿ ಹಾಗೂ ಹಿತಮಿತವಾಗಿ ಬಳಸುವ ಮೂಲಕ ಇದರ ಲಾಭ ಪಡೆಯಬೇಕು ಎಂದು ಮನವಿ ಮಾಡಿದ್ದಾರೆ.

ಇದೇ ಸಮಯದಲ್ಲಿ ಕಳೆದ ವರ್ಷಕ್ಕೆ ಜಲಾಶಯಗಳಲ್ಲಿನ ನೀರಿನ ಸಂಗ್ರಹಕ್ಕೆ ಹೋಲಿಸಿದಾಗ ಈ ವರ್ಷ ಪ್ರಸಕ್ತ ಶೇ.50ರಷ್ಟು ಸಂಗ್ರಹ ಕಡಿಮೆ ಇದೆ. ಮುಂಬರುವ ಬೇಸಿಗೆಯಲ್ಲಿ ಜನ-ಜಾನುವಾರು ಕುಡಿವ ನೀರಿಗೆ ಜಲಾಯದಲ್ಲಿ ನೀರು ಸಂಗ್ರಹಿಸಿಡುವುದು ಅಗತ್ಯವಾಗಿದೆ. ಇಂತಹ ಸಂದಿಗ್ಧ ಸಂದರ್ಭದಲ್ಲಿಯೂ ರಾಜ್ಯದ ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಮನಸ್ಸು ಮಾಡಿ ರೈತರ ಸಂಕಷ್ಟಕ್ಕೆ ನೆರವಾಗೋಣವೆಂದು ಕಾಲುವೆಗೆ 2.75 ಟಿಎಂಸಿ ನೀರನ್ನು ಹರಿಸಲು ಮುಂದಾಗಿರೋದು ನೋಡಿದರೆ ನಿಜವಾಗಿಯೂ ರೈತರ ಪರವಾದ ಸರ್ಕಾರ ನಮ್ಮದು ಎದು ಹೇಳಲು ಹೆಮ್ಮೆ ಎನಿಸುತ್ತದೆ ಎಂದು ಡಾ. ಅಜಯ್ ಸಿಂಗ್ ಹೇಳಿದ್ದಾರೆ.

ಜೇವರ್ಗಿ ಮತಕ್ಷೇತ್ರದಲ್ಲಿ ಬರುವ ಇಂಡಿ, ಜೇವರ್ಗಿ, ಮುಡಬೂಳ್ ಶಾಖಾ ಕಾಲುವೆಗಳಿಗೆ ಇನ್ನೇನು ಕೃಷ್ಣೆಯ ನೀರು ಹರಿದು ಬರಲಿದ್ದು ಈ ಕಾಲುವೆಗಳ ಇಕ್ಕೆಲಗಳಲ್ಲಿರುವ ರೈತರು ನೀರಿನ ಸದ್ಬಳಕೆಗೆ ಮುಂದಾಗಬೇಕು. ಪರಸ್ಪರ ಸಹಕಾರದಿಂದ ನೀರನ್ನು ಪಡೆದು ಮೆಣಸಿನಕಾಯಿ ಬೆಳೆ ಉತ್ಪನ್ನ ಪಡೆಯಬೇಕು.

ಬೆಳೆ ಸಂರಕ್ಷಣೆಗೆ ನೀರನ್ನು ಪಡೆಯಲು ರೈತರೆಲ್ಲರೂ ನೀರಾವರಿ ಇಲಾಖೆ ಅಧಿಕಾರಿಗಳ ಜೊತೆ ಪರಸ್ಪರ ಸಹಕಾರದಿಂದ ವರ್ತಿಸಬೇಕು ಎಂದು ಡಾ. ಅಜಯ್ ಧರಂಸಿಂಗ್ ಅವರು ರೈತ ಸಮೂಹವನ್ನು ಕೋರಿದ್ದಾರೆ.

ಕರ್ನಾಟಕ ಸಂಭ್ರಮ ಜ್ಯೋತಿ ರಥಯಾತ್ರೆಗೆ ಅದ್ಧೂರಿ ಸ್ವಾಗತ

• **ಕನ್ನಡಪ್ರಭ ವಾರ್ತೆ** ಯಡ್ರಾಮಿ

ಕರ್ನಾಟಕ ರಾಜ್ಯ ನಾಮಕರಣಗೊಂಡು 50 ವರ್ಷ ಪೂರೈಸಿದೆ ಈ ಸ್ಮರಣಾರ್ಥವಾಗಿ, ಘನ ಸರ್ಕಾರ ಕರ್ನಾಟಕದ ,ಇತಿಹಾಸ ಕಲೆ, ಸಾಹಿತ್ಯ, ನಾಡು, ನುಡಿ ಸಂಸ್ಕೃತಿಯ ಪ್ರತಿಯೊಬ್ಬರು ತಿಳಿಯಲೆಂದು ರಾಜ್ಯದಾದ್ಯಂತ ಕನ್ನಡದ ಜ್ಯೋತಿ ರಥಯಾತ್ರೆ ಕೈಗೊಂಡಿದೆ, ಇದು ನಮ್ಮ ಕನ್ನಡ ನಾಡಿನ ರಥೋತ್ಸವ, ಸಂಭ್ರಮದಿಂದ ಈ ರಥಯಾತ್ರೆಯನ್ನು ಯಶಸ್ವಿಗೊಳಿಸೋಣ ಎಂದು ತಹಸೀಲ್ದಾರ್ ನಾಗನಾಥ ಸೇಡಂ ಹೇಳಿದರು.

ಭಾನುವಾರ ತಾಲೂಕಿನ ಗಡಿ ಭಾಗ ಇಜೇರಿ ಗ್ರಾಮಬಳಿ 'ಕನ್ನಡ ಜ್ಯೋತಿ ರಥ ಯಾತ್ರೆಗೆ' ಯಡ್ರಾಮಿ ತಾಲೂಕು ಆಡಳಿತ ಅದ್ಧೂರಿಯಾಗಿ ಬರ ಮಾಡಿಕೊಳ್ಳಲಾಯಿತು. ನಂತರ ಪಟ್ಟಣದ ಡಾ. ಬಿ.ಆರ್. ಅಂಬೇಡ್ಕರ್‌ವೃತ್ತದಿಂದ ಸರ್ದಾರ ಶರಣಗೌಡ ವೃತ್ತವರೆಗೆ ಕನ್ನಡ ತಾಯಿ ಭುವನೇಶ್ವರಿದೇವಿ ಭಾವಚಿತ್ರವನ್ನು ರಥದಲ್ಲಿಸಿ ಅದ್ಧೂರಿ ಮೆರವಣಿಗೆ ನಡೆಸಲಾಯಿತು.

ನಮ್ಮ ಕನ್ನಡ ಭಾಷೆಗೆ ನಾಲ್ಕು ಸಾವಿರ ವರ್ಷಗಳ ಇತಿಹಾಸವಿದೆ, ಕನ್ನಡದ ಇತಿಹಾಸದ ಬಗ್ಗೆ ಪ್ರತಿಯೊಬ್ಬ ಕನ್ನಡಿಗನು ತಿಳಿದಿರಬೇಕು, ಹಾಗೆ ಕರ್ನಾಟಕ ಏಕೀಕರಣ ಮತ್ತು ನಾಡು ನುಡಿಗಾಗಿ ದುಡಿದ ಮಹನೀಯರನ್ನು ನಾವುಗಳು ಆಗಾಗ ಸ್ಮರಿಸಬೇಕು ಎಂದರು.

ಈ ಸಂದರ್ಭದಲ್ಲಿ ತಹಸೀಲ್ದಾರ್ ನಾಗನಾಥ ಸೇಡಂ ಪಪಂ ಮುಖ್ಯಾಧಿಕಾರಿ ಸಂತೋಷ ರೆಡ್ಡಿ , ತಾ.ಪಂ ಅಧಿಕಾರಿ ಮಾಂತೇಶ ಪುರಾಣಿಕ, ಕೃಷಿ ಅಧಿಕಾರಿ ಶಾಂತಗೌಡ ಗೂಗಲ್ ಹಾಗೂ ತಾಲೂಕ ಮಟ್ಟದ ವಿವಿಧ ಇಲಾಖೆ ಅಧಿಕಾರಿಗಳು ಹಾಗೂ ಸಿಬ್ಬಂದಿ ಪಾಲ್ಗೊಂಡಿದ್ದರು.

ಇಂದು ಅಂತಾರಾಷ್ಟ್ರೀಯ ಸಮ್ಮೇಳನ

ಕಲಬುರಗಿ: ಗುಲ್ಬರ್ಗ ವಿಶ್ವವಿದ್ಯಾಲಯ ಹಾಗೂ ಯುನೈಟೆಡ್ ಕಿಂಗ್‌ಡಂನ ಬ್ರಾಡ್‌ಫೋರ್ಡ್ ವಿಶ್ವವಿದ್ಯಾಲಯದ ಜಂಟಿ ಸಹಯೋಗದೊಂದಿಗೆ 'ರೀಸೆಂಟ್ ಅಡ್ವಾನ್ಸಸ್ ಇನ್ ಬಯೋ-ನ್ಯಾನೋ ಕಾಂಪೋಸೈಟ್ಸ್ ಫಾರ್ ಎನಾಸ್ಟಿಂಗ್ ಹ್ಯುಮನ್ ಹೆಲ್ತ್' ವಿಷಯ ಕುರಿತು ಎರಡು ದಿನಗಳ ಅಂತರಾಷ್ಟ್ರೀಯ ಸಮ್ಮೇಳನ ಜ.8 ರಂದು ಬೆ.10 ಗಂಟೆಗೆ ಜ್ಞಾನಗಂಗಾ ಆವರಣದ ಡಾ.ಅಂಬೇಡ್ಕರ್ ಭವನದಲ್ಲಿ ಜರುಗಲಿದೆ.

ಕರ್ನಾಟಕ ಉನ್ನತ ಶಿಕ್ಷಣ ಸಚಿವ ಹಾಗೂ ವಿಶ್ವವಿದ್ಯಾಲಯಗಳ ಸಮಕುಲಾಧಿಪತಿ ಡಾ. ಎಂ.ಸಿ. ಸುಧಾಕರ್ ಉದ್ಘಾಟಿಸುವರು. ಮುಖ್ಯ ಅತಿಥಿಗಳಾಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ, ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯ ಅಭಿವೃದ್ಧಿ ಸಚಿವ ಶರಣಪ್ರಕಾಶ ಪಾಟೀಲ ಹಾಗೂ ಶಾಸಕ ಡಾ. ಅಜಯ್ ಸಿಂಗ್ ಭಾಗವಹಿಸುವರು.

ಯುನೈಟೆಡ್ ಕಿಂಗ್‌ಡಮ್‌ನ ಬ್ರಾಡ್‌ಫೋರ್ಡ್ ವಿಶ್ವವಿದ್ಯಾಲಯದ ಉಪ ಕುಲಪತಿ ಪ್ರೊ. ಶೆರ್ಲಿ ಕಾಂಡನ್ ಘನ ಉಪಸ್ಥಿತಿ ವಹಿಸಲಿದ್ದು, ಹರಿಯಾಣ ರಾಜ್ಯದ ಅಮಿಟಿ ವಿಶ್ವವಿದ್ಯಾಲಯದ ವಿಜ್ಞಾನ ನಿಕಾಯದ ಡೀನ್, ಇಂಜಿನಿಯರಿಂಗ್ ಆಂಡ್ ಟೆಕ್ನಾಲಜಿ ಹಾಗೂ ಅಮಿಟಿ ಇನ್‌ಸ್ಟಿಟ್ಯೂಟ್ ಆಫ್ ಬಯೋಟೆಕ್ನಾಲಜಿ ವಿಭಾಗದ ನಿರ್ದೇಶಕರಾದ ಪ್ರೊ. ರಾಜೇಂದ್ರ ಪ್ರಸಾದ್ ಪ್ರಧಾನ ಭಾಷಣ ಮಾಡುವರು.

ಅತಿಥಿಗಳಾಗಿ ಗುಲ್ಬರ್ಗ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಹಾಗೂ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತ ಉಪಾಧ್ಯಾಕ್ಷ ಪ್ರೊ. ಎಸ್.ಆರ್. ನಿರಂಜನ, ಭಾರತದ ಬ್ರಿಟಿಷ್ ಕೌನ್ಸಿಲ್‌ನ ಉನ್ನತ ಶಿಕ್ಷಣ ಕಾರ್ಯಕ್ರಮಗಳ ಮುಖ್ಯಸ್ಥ ರಾಜೇಂದ್ರ ತ್ರಿಪಾಠಿ, ಗುಲ್ಬರ್ಗ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರಾದ ರಾಘವೇಂದ್ರ ಎಂ. ಬೈರಪ್ಪ, ವಿದ್ಯಾ ವಿಷೇಯಕ ಪರಿಷತ್ತ ಸದಸ್ಯ ಪ್ರೊ. ಟಿ. ಶಂಕರಪ್ಪ ಭಾಗವಹಿಸುವರು. ಕುಲಪತಿ ಪ್ರೊ. ದಯಾನಂದ ಅಗಸರ ಅಧ್ಯಕ್ಷತೆ ವಹಿಸುವರು. ಸಮ್ಮೇಳನದ ಸಂಘಟನಾ ಕಾರ್ಯದರ್ಶಿಗಳಾದ ಗುಲಬರ್ಗಾ ವಿಶ್ವವಿದ್ಯಾಲಯದ ಸಸ್ಯಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಪ್ರೊ. ಜೆ.ಎಂ. ವಿದ್ಯಾಸಾಗರ್, ಯುನೈಟೆಡ್ ಕಿಂಗ್‌ಡಮ್‌ನ ಬ್ರಾಡ್‌ಫೋರ್ಡ್ ವಿಶ್ವವಿದ್ಯಾಲಯದ ಡಾ. ಎಸ್. ಎ ಬೆಹ್ಜಾ. ಖಿಫಾನಿ ಹಾಗೂ ಗುಲ್ಬರ್ಗ ವಿಶ್ವವಿದ್ಯಾಲಯದ ಕುಲಸಚಿವ ಡಾ. ಬಿ. ಶರಣಪ್ಪ ಉಪಸ್ಥಿತರಿರುವರು.

ಕಲಿಕಾ ಮೇಳದಿಂದ ಮಕ್ಕಳ ಪ್ರತಿಭೆ ಅನಾವರಣ: ಬಿಇಒ ಸಿದ್ಧವೀರಯ್ಯ

• **ಕನ್ನಡಪ್ರಭವಾರ್ತೆ** ಶಹಾಬಾದ

■ ಕಲಿಕಾ ಮೇಳದಲ್ಲಿ ಮಕ್ಕಳು ತಮ್ಮ ಟಿಎಲ್‌ಎಂ ತಯಾರಿಸಿ ಪ್ರಸ್ತುತ ಪಡಿಸುವುದರಿಂದ ಕಲಿಕಾ ಮಟ್ಟ ಹೆಚ್ಚಿಸುತ್ತದೆ.

ಕೇವಲ ಪಾಠ ಬೋಧನೆಗಳಿಂದ ಮಕ್ಕಳ ಜ್ಞಾನ ವಿಕಾಸವಾಗಲು ಸಾಧ್ಯವಿಲ್ಲ ಕಲಿಕಾ ಮೇಳದಂತಹ ಚಟುವಟಿಕೆಗಳಿಂದ ಮಕ್ಕಳಲ್ಲಿರುವ ವಿವಿಧ ಸಾಮರ್ಥ್ಯ ಹೊರಬರಲು ಸಾಧ್ಯವೆಂದು ಕ್ಷೇತ್ರ ಶಿಕ್ಷಣಾಧಿಕಾರಿ ಸಿದ್ಧವೀರಯ್ಯ ರುದ್ನೂರ ಹೇಳಿದರು.

ಅವರು ರಾವೂರ ಗ್ರಾಮದ ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆಯಲ್ಲಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಅಜೀಮ್ ಪ್ರೇಮಜಿ ಫೌಂಡೇಷನ್ ಕಲಬುರಗಿ, ಬಿಆರ್‌ಸಿ ಕಚೇರಿಗಳ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ರಾವೂರ ಕ್ಲಸ್ಟರ್ ಮಟ್ಟದ ಶಾಲಾ ಮಟ್ಟದ ಕಲಿಕಾ ಮೇಳವನ್ನು ವೀಕ್ಷಿಸಿ ಮಾತನಾಡುತ್ತ, ಕಲಿಕಾ ಮೇಳದಲ್ಲಿ ಮಕ್ಕಳು ತಮ್ಮ ಟಿಎಲ್‌ಎಂ ತಯಾರಿಸಿ ಪ್ರಸ್ತುತ ಪಡಿಸುವುದರಿಂದ ಅವರ ಕಲಿಕಾ ಮಟ್ಟ ಹೆಚ್ಚಿಸುವುದಲ್ಲದೇ ಅನೇಕ ಸಾಮರ್ಥ್ಯ ವೃದ್ಧಿಸುತ್ತವೆ ಎಂದು ಹೇಳಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಬಿಆರ್‌ಸಿ ಮಲ್ಲಿಕಾರ್ಜುನ ಸೇಡಂ ಮಾತನಾಡಿ ಕಲಿಕಾ ತುಂಬಾ ವಿಶೇಷತೆಯಿಂದಕೂಡಿದ್ದು ಪ್ರತಿ ಶಿಕ್ಷಕರಿಗೆ 15 ಮಕ್ಕಳನ್ನುನೀಡಿಕಲಿಕೋಪಕರಣಗಳನ್ನುತಯ್ಯಾರಿಸುವ ವಿಶೇಷ ಚಟುವಟಿಕೆಗಳು ಪರಿಣಾಮಕಾರಿ ಕಲಿಕೆಗೆ ಅನುಕೂಲವಾಗುತ್ತವೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ 509 ಮಕ್ಕಳು 40 ಶಿಕ್ಷಕರು ಮತ್ತು ಹಲವಾರು ಪಾಲಕರು ಉಪಸ್ಥಿತರಿದ್ದು ಕಲಿಕಾ ಮೇಳವನ್ನು ಯಶಸ್ವಿಗೊಳಿಸಿದರು. ವೇದಿಕೆಯ ಮೇಲೆ ರಾವೂರ ಗ್ರಾ.ಪಂ ಅಧ್ಯಕ್ಷೆ ಸುಮಿತ್ರಾ ತುಮಕೂರ, ಶಾಲೆಯ ಮುಖ್ಯಗುರು ಮನೋಹರಜೋಷಿ, ಪ್ರಮುಖರಾದ ಶಿವಾನಂದ ನಾಲವಾರ, ಅಬ್ದುಲ್ ಸಲೀಂ ಪ್ಯಾರೆ, ಬಿಆರ್‌ಪಿ ಆಶ್ವಿನಿ, ನಾಗೂಬಾಯಿ, ವೆಂಕಟರೆಡ್ಡಿ, ಸಾಗರ, ಶೃತಿ, ತರುಣ್, ಖಾಜುಮಿಯಾ ದಂಡೋತಿ ಇದ್ದರು, ಸಿಆರ್‌ಪಿ ಕವಿತಾ ಸಾಲೋಕಿ ಪ್ರಾಸ್ತಾವಿಕವಾಗಿ ಮಾತನಾಡಿದರು, ಶಿಕ್ಷಕಿ ಲಕ್ಷ್ಮಿ ನಿರೂಪಿಸಿದರು, ಭುವನೇಶ್ವರಿ ಸ್ವಾಗತಿಸಿದರು, ಅನ್ನಪೂರ್ಣ ವಂದಿಸಿದರು.

PUBLIC NOTICE

That **Smt. Veena D/o Mallikarjun Patil** being owner in possession of **Plot No: 37** measuring **30 X 40-1200 Sq. Ft situated at land Sy. No: 78/4** of Badepur Kalburagi is intending to avail loan facility from State Bank of India by mortgaging his property i.e, shown above. The link original **Sale Deed bearing No: 4056/2001-02 dated 23.10.2001** executed by City Municipal Corporation Kalburagi in favour of Mr. Srimanth Rao S/o Siddaramappa Patil has lost on 05.01 2024 while getting into Xerox at Santraswadi Kalburagi.

Through this public notice, it is informed, if anybody, private, public or financial institutions, Bank or any individual is having any objections, claim right title, interest over the aforesaid property may contact with supporting documents to the undersigned Advocate within 07 days from the date of this public notice otherwise the SBI will create the charge treating that no one is having any objections and grievances.

Hence this notice.

Basavaraj Biradar , Advocate
M.K. Tower, Near Chetan School,
Super Market, Kalaburagi.
Cell 9448749405
Date: 06-01-2024 Place : Kalaburagi

21ನೇ ವರ್ಷದ ಪುಣ್ಯಸ್ಮರಣೆ

ದಿ|| ಎಂ. ಲಕ್ಷ್ಮಣ್‌ರವರು

ಮರಣ : 08.01.2003

ನೀವು ನಮ್ಮನ್ನು ಅಗಲಿ ಇಂದಿಗೆ ಇಪ್ಪತ್ತೊಂದು ವರ್ಷಗಳು ಸಂದರೂ ನಿಮ್ಮ ಸವಿನೆನಪು ಹೃದಯಾಂತರಾಳದಲ್ಲಿ ಅಚ್ಚಳಿಯದೆ ಉಳಿದಿದೆ. ನಿಮ್ಮ ದಿವ್ಯ ಆತ್ಮಕ್ಕೆ ಭಗವಂತನು ಚಿರಶಾಂತಿಯನ್ನು ನೀಡಲಿ.

ಶ್ರೀಮತಿ ಮತ್ತು ಶ್ರೀ ಎಂ. ಕೃಷ್ಣಪ್ಪ ನವರು,

ಶಾಸಕರು ವಿಜಯನಗರ ಕ್ಷೇತ್ರ ಬೆಂಗಳೂರು-40, ಮಾಜಿ ವಸತಿ ಖಾತೆ ಸಚಿವರು-ಕರ್ನಾಟಕ ಸರ್ಕಾರ.
ಶ್ರೀ ಪ್ರಿಯಾಕೃಷ್ಣ, ಶಾಸಕರು, ಗೋವಿಂದರಾಜನಗರ ಕ್ಷೇತ್ರ ಬೆಂಗಳೂರು-40
ಶ್ರೀಮತಿ ಮತ್ತು ಶ್ರೀ ಪ್ರದೀಪ್ ಕೃಷ್ಣಪ್ಪನವರು ಮಾಲೀಕರು S.L.N Enterprises.
ಹಾಗೂ ಮೃತರ ಪತ್ನಿ ಶ್ರೀಮತಿ ಜಯಮ್ಮ ಮತ್ತು ಕುಟುಂಬವರ್ಗದವರು,
ಸಹೋದರರು ಸ್ನೇಹಿತರು ಹಾಗೂ ಬಂಧು-ಮಿತ್ರರು, ಆತ್ತಿಗುಪ್ಪೆ, ವಿಜಯನಗರ, ಬೆಂ-40

ಆಳಂಗಾ ಗ್ರಾಮದ ಸರ್ಕಾರಿ ಶಾಲಾ ಮಕ್ಕಳಿಗೆ ಬ್ಯಾಗ್ ವಿತರಣೆ

• **ಕನ್ನಡಪ್ರಭ ವಾರ್ತೆ** ಆಳಂದ

ತಾಲೂಕಿನ ಗಡಿ ಸರಹದಿನ ಆಳಂಗಾ ಗ್ರಾಮದ ಸರ್ಕಾರಿ ಮರಾಠಿ ಮತ್ತು ಕನ್ನಡ ಮಾಧ್ಯ ಪ್ರಾಥಮಿಕ ಶಾಲೆಯಲ್ಲಿ ಡಾ. ಪೃಥ್ವಿರಾಜ ಪ್ರಭಾಕರ್ ಚವ್ಹಾಣ ಅವರ ಮದುವೆ ವಾರ್ಷಿಕೋತ್ಸವ ನಿಮಿತ್ತ ಶಾಲೆಯ 135 ವಿದ್ಯಾರ್ಥಿಗಳಿಗೆ ಶಾಲಾ ಬ್ಯಾಗ್ ವಿತರಿಸಲಾಯಿತು.

ಹುಟ್ಟಿದ ಊರಿನ ಮಕ್ಕಳ ಕಲಿತು ಮುಂದೆ ಗುರಿ ಸಾಧಿಸಲಿ ಎಂಬ ಉದ್ದೇಶದಿಂದ ಕೈಲಾದ ಮಟ್ಟಿಗೆ ಅಲ್ಪಸೇವೆಯನ್ನು ಶಾಲಾ ಬ್ಯಾಗ್ ವಿತರಿಸುವ ಮೂಲಕ ಕೈಗೊಳ್ಳಲಾಗುತ್ತಿದೆ. ವಿತರಿಸಿದ ಗುಣಮಟ್ಟದ ಬ್ಯಾಗ್ ಸದ್ಬಳಕೆ ಮಾಡಿಕೊಂಡು ಉತ್ತಮ ಶಿಕ್ಷಣ ಪಡೆದು ಗ್ರಾಮದ ಕೀರ್ತಿಯನ್ನು ತರಬೇಕು ಎಂದು ಡಾ. ಪೃಥ್ವಿರಾಜ್ ಚವ್ಹಾಣ ಅವರು ಹೇಳಿದರು.

ನಿವೃತ್ತ ಪ್ರೌಢಶಾಲೆ ಮುಖ್ಯ ಶಿಕ್ಷಕ ಪ್ರಭಾಕರ ಚವ್ಹಾಣ ಅವರು ಮಾತನಾಡಿ, ಜೀನು ಹುಳಗಳು ಮಕರಂದ ಹೀರಿ ಜೀನುಗೂಡು ಕಟ್ಟಿದಂತೆ ವಿದ್ಯಾರ್ಥಿಗಳ ಸಹ ಸಿಕ್ಕ ಕಡೆ ಜ್ಞಾನವನ್ನು ಪಡೆದು ಗುರಿಯನ್ನು ಸಾಧಿಸಿ ಗ್ರಾಮದ ಕೀರ್ತಿಯನ್ನು ತರಬೇಕು ಎಂದು ಹೇಳಿದರು.

ಆಳಂದ ತಾಲೂಕಿನ ಗಡಿಗ್ರಾಮ ಆಳಂಗಾ ಸರ್ಕಾರಿ ಶಾಲೆಯಲ್ಲಿ ಡಾ. ಪೃಥ್ವಿರಾಜ ಪಿ. ಚವ್ಹಾಣ ಅವರು ತಮ್ಮ ಮದುವೆ ವಾರ್ಷಿಕೋತ್ಸವ ಅಂಗವಾಗಿ ಮಕ್ಕಳಿಗೆ ಶಾಲಾ ಬ್ಯಾಗ್ ವಿತರಿಸಿದರು. ಮುಖ್ಯ ಶಿಕ್ಷಕ ಕಾಶಿನಾಥ, ಪಂಡಿತ ಸಿಂಧೆ ಇತರರು ಇದ್ದರು.

ಮರಾಠಿ ಶಾಲೆಯ ಮು